ಮಳೆ ತನ್ನ ಅಪರೂಪದ ಮುಖವನ್ನು ತೋರಿಸಿತ್ತು. ಬಯಲುಸೀಮೆ ಪುಳಕಗೊಂಡಿತ್ತು. ಪಸೆಯಾರಿದ ಮಣ್ಣು ಮಳೆಯ ಮುತ್ತಿಗೆ ಬಿರಿದು ತುಂಬಿಕೊಳ್ಳುವಂತೆ ಆ ಹಳ್ಳಿಯ ದೇಹಗಳೂ ಬಿರಿದು ತುಂಬಿಕೊಳ್ಳಲು ಪ್ರಾರಂಭಿಸಿದ್ದವು. ಹಿಂದಿನ ವರ್ಷ ಸರಿಸುಮಾರು ಇದೇ ತಿಂಗಳಲ್ಲಿ ಆ ಊರ ಕೆರೆಗೆ ಬೆಂಗಳೂರಿನ ಸಂಸ್ಕರಿಸಿದ ತ್ಯಾಜ್ಯ ನೀರು ಹರಿದು ಬಂದದ್ದು. ಹರಿದು ಬರುತ್ತಿರುವ ನೀರನ್ನು ಕಣ್ತುಂಬಿಕೊಳ್ಳಲು ಬಂದಿದ್ದ ಜನರ ಸಂಭ್ರಮ ಸ್ವಲ್ಪ ಹೊತ್ತಿಗೆಲ್ಲ ಇಂಗಿ ಹೋಗಿತ್ತು. ಕಪ್ಪು ನೀರು... ಕೆಟ್ಟ ವಾಸನೆ. ಇಂತಹ ನೀರಿನ ಜೊತೆ ತಾವು ಮತ್ತು ತಮ್ಮ ಮಕ್ಕಳು ಬಾಳುವುದಾದರೂ ಹೇಗೆ ಎಂಬ ಪ್ರಶ್ನೆ ಬಹುಪಾಲು ಜನರನ್ನು ಗಾಸಿಗೊಳಿಸಿತ್ತು. ಹಾಗೆಯೆ ಇಂಥ ನೀರು ತಮಗೆ ಬೇಡ ಎಂದು ಹೋರಾಟಕ್ಕೂ ಇಳಿದುಬಿಟ್ಟಿದ್ದರು.

ಬೆಂಗಳೂರಿನ ನೀರನ್ನು ಹೊತ್ತು ತರುತ್ತಿದ್ದ ಕಾಲುವೆಗೆ ಒಂದು ಕಡೆ ಮಣ್ಣು ಕಲ್ಲುಗಳನ್ನು ಸುರಿದು ಅಡ್ಡಗಟ್ಟಲಾಯಿತು. ದಿಕ್ಕು ತಪ್ಪಿದ ನೀರು ಅರ್ಧ ಕಿಲೋಮೀಟರ್ ದೂರದಲ್ಲಿದ್ದ ಪಟ್ಟಣದೊಳಕ್ಕೆ ನುಗ್ಗಿ ಮತ್ತೊಂದು ಅವಾಂತರ ಸೃಷ್ಟಿಯಾಗಿ ಅಲ್ಲೂ ಪ್ರತಿಭಟನೆ ಹುಟ್ಟಿಕೊಂಡಿತು. ಆ ಯೋಜನೆಯ ಅನುಷ್ಠಾನ ಮಂಡಳಿಗೆ ಯಾಕೋ ಇದು ಸರಿಹೋಗುತ್ತಿಲ್ಲ, ಒಂದಷ್ಟು ದಿನ ಸುಮ್ಮನಿದ್ದು ಮತ್ತೆ ಹಿಡಿತಕ್ಕೆ ತಕೊಂಡರಾಯಿತು ಎಂದುಕೊಂಡು ಆ ಊರ ಕೆರೆಗೆ ತೆರೆದುಕೊಂಡಿದ್ದ ಕಾಲುವೆಯನ್ನು ಮತ್ತೊಂದು ಕೆರೆಗಳ ಸಾಲಿನ ಕಡೆಗೆ ತಿರುಗಿಸಿ ಸುಮ್ಮನಾಗಿದ್ದರು. ಇಷ್ಟಾಗುವಷ್ಟರಲ್ಲಿ ಕೆರೆ ಮುಕ್ಕಾಲು ಭಾಗ ತುಂಬಿಕೊಂಡಿತ್ತು. ಒಂದೆರಡು ತಿಂಗಳು ಕಳೆಯುವಷ್ಟರಲ್ಲಿ ಆ ನೀರೆಲ್ಲ ಇಂಗಿ ಏರಿಯಾ ಬುಡದಲ್ಲಿ ನಿರ್ಮಿತವಾಗಿದ್ದ ದೊಡ್ಡ ದೊಡ್ಡ ಬಾವಿಗಳಂತೆ ಕಾಣುತ್ತಿದ್ದ ಹಳ್ಳಗಳಲ್ಲಿ ಮಾತ್ರ ಉಳಿದುಕೊಂಡಿತ್ತು. ಅದೂ ಇನ್ನೇನು ಪೂರ್ತಿ ಇಂಗಿಹೋಯಿತೇನೋ ಎನ್ನುವಷ್ಟರಲ್ಲೇ ಎರಡು ತಿಂಗಳ ಹಿಂದೆ ಬಿದ್ದ ಮಳೆಗೆ ಮತ್ತೆ ಒಂದಷ್ಟು ತುಂಬಿಕೊಂಡಿದ್ದವು.

ಹಿಂದಿನ ದಿನ ಸಂಜೆಯವರೆಗೂ ಶಾರದಮ್ಮನೂ ಸಂಭ್ರಮದಲ್ಲೇ ಇದ್ದಳು. 'ಅಂತೂ ಕರುಣಿಸಿದೆಯ ನಮ್ಮಮ್ಮ' ಎಂದು ಮುಗಿಲ ಕಡೆಗೆ ಮುಖ ಮಾಡಿ ಎರಡೂ ಕೈಗಳನ್ನು ಎತ್ತಿ ನಮಸ್ಕರಿಸಿದ್ದಳು. ಬಾಗಿಲಲ್ಲಿ ನಿಂತು ಬೀಳುತ್ತಿರುವ ಮಳೆಗೆ ಬೊಗಸೆ ಹಿಡಿದು ತುಂಬಿಕೊಂಡಿದ್ದಳು. ಮತ್ತದನ್ನು ಕಣ್ಣು ಮುಚ್ಚಿಕೊಂಡು ಧ್ಯಾನಕ್ಕೆ ಜಾರಿದವಳಂತೆ ಕುಡಿದು ಸಂಪನ್ನಗೊಂಡಿದ್ದಳು. ತನ್ನ ಚಿಕ್ಕಂದಿನ ದಿನಗಳಿಗೆ ಜಾರಿ ಆ ದಿನಗಳಲ್ಲಿ ಹೀಗೆಯೇ ಬೀಳುತ್ತಿದ್ದ ಮಳೆಗೆ ತೆರೆದುಕೊಳ್ಳುತಿದ್ದ ಬಗೆಯನ್ನು ನೆನೆದುಕೊಂಡು ಮುದಗೊಂಡಿದ್ದಳು. ತನ್ನ ಓರಗೆಯವರೊಡನೆ ಕೈಕೈ ಹಿಡಿದು, ತುಂಬಿ ಹರಿಯುತ್ತಿರುವ ಹಳ್ಳವನ್ನು ದಾಟಿದ ಬಗೆ ಅವಳಿಗೆ ಇಂದಿಗೂ ನೆನಪಿರುವಂತದ್ದೆ. ಅಂದು ಯಾರಾದರೂ ಒಬ್ಬರು ಎಡವಿದ್ದರೂ ಒಂದಷ್ಟು ಮಂದಿ ಕೊಚ್ಚಿಕೊಂಡು ಹೋಗುವ ಸಾಧ್ಯತೆ ಇತ್ತು. ಆ ಸಂಜೆಯ ಗುಡುಗು, ಸಿಡಿಲು, ಬಾನ ತುಂಬು ತಪಲೆ ಮಗುಚಿ ಬಿದ್ದಂತೆ ಹೊಯ್ದ ಮಳೆ – ಮತ್ತೆ ಅವಳು ಅಂತಹ ಮಳೆಯನ್ನು ಕಂಡಿದ್ದಿಲ್ಲ. ಬರೋಬ್ಬರಿ ನಲವತ್ತು ವರ್ಷಗಳೆ ಕಳೆದುಬಿಟ್ಟವೇನೊ. ಅಂದು ತುಂಬಿದ್ದ ಕೆರೆ ಮತ್ತೆ ಇದುವರೆಗೂ ತುಂಬಿದ್ದಿಲ್ಲ. ಏರಿ ಬದಿಯ ಸ್ಲಾಬುಗಳು ತುಂಬುವುದೇ ಈ ನಲವತ್ತು ವರ್ಷಗಳ ಸಾಧನೆ ಎಂಬಂತಾಗಿತ್ತು. ಮತ್ತೀಗ ಅದೇ ಬಗೆಯ ಮಳೆ. ಅದಕ್ಕಿಂತ ತುಸು ಹೆಚ್ಚಿನದೇನೋ ಎನ್ನುವಂತೆಯೂ ಇತ್ತು.

ಹಿಂದಿನ ದಿನ ಸಂಜೆಯವರೆಗೂ ಇದ್ದ ಅವಳ ಸಂಭ್ರಮ ರಾತ್ರಿಯಾಗುತ್ತಿದ್ದಂತೆ ದುಗುಡ, ಹತಾಶೆ, ಕೋಪ, ಅಸಹಾಯಕತೆ, ನೋವುಗಳಾಗಿ ಮಗ್ಗಲು ಬದಲಿಸುತ್ತಲೇ ಇತ್ತು. ತಾರಸಿಗೆ ಮಣ್ಣು ಹೊಡೆದು ಅದೆಷ್ಟು ವರ್ಷಗಳಾಗಿ ಹೋಗಿತ್ತೋ... ಮಳೆಯ ಲಕ್ಷಣಗಳೇ ಇಲ್ಲದಿದ್ದರಿಂದ ಅದರ ಅವಶ್ಯಕತೆ ಇಲ್ಲವೆನ್ನುವಂತೆ ಸುಮ್ಮನಿದ್ದಳು. ಅವಳಲ್ಲಿ ಅಷ್ಟು ದೈಹಿಕ ಮತ್ತು ಆರ್ಥಿಕ ತ್ರಾಣವೂ ಇಲ್ಲದಿದ್ದುದರಿಂದ ಬೇರೆ ದಾರಿ ಕಾಣದೆ ಸುಮ್ಮನಾಗಿದ್ದಳು. ಅವಳ ಗಂಡ ಬದುಕಿದ್ದಾಗ ಹೊಡೆದಿದ್ದ ಮಣ್ಣು. ಅದೂ ಊರ ಹಿಂದಿನ ದಿಣ್ಣೆ ಮಣ್ಣು. ಎತ್ತಿನ ಗಾಡಿಯಲ್ಲಿ ತುಂಬಿಕೊಂಡು ಬಂದು ಹಾಸಿದ್ದು. ಈಗ ತಾರಸಿ, ಗೋಡೆ ಎಲ್ಲವೂ ದುರ್ಬಲಗೊಂಡಿರುವುದರಿಂದ ಎರಡು ದಿನಗಳ ಬಿಡದ ಮಳೆಗೆ ಮನೆ ನಿಲ್ಲಲೂ ಜಾಗವಿಲ್ಲದ ಹಾಗೆ ತೊಟ್ಟಿಕ್ಕಲು ಶುರುಹಚ್ಚಿಕೊಂಡಿತ್ತು. ಗೋಡೆಗಳ ಒಳಗೂ